# ಅನುಬಂಧ–4
## (ಕರಾರು)

ಬೆಂಗಳೂರು ಗ್ರಾಮಾಂತರ ಜಿಲ್ಲೆ ................ ತಾಲ್ಲೂಕು ............... ಹೋಬಳಿ, ................... ಗ್ರಾಮದ ............. ವಾಸವಾಗಿರುವ ಶ್ರೀ.................................. ವಯಸ್ಸು ಸುಮಾರು ಆದ ನಾನು ಘೋಷಿಸುವುದೇನೆಂದರೆ:

ಬೆಂಗಳೂರು ಗ್ರಾಮಾಂತರ ಜಿಲ್ಲೆ ................ ತಾಲ್ಲೂಕು ............... ಹೋಬಳಿ, .................. ಗ್ರಾಮದ ಸ.ನಂ. ............. ರಲ್ಲಿ ................ ವಿಸ್ತೀರ್ಣಕ್ಕೆ ವಾಸದ ಉದೇಶಕ್ಕಾಗಿ ಭೂಪರಿವರ್ತನೆ ಮಂಜೂರು ಮಾಡಲು ಕೋರಿ ಅರ್ಜಿ ಸಲ್ಲಿಸಿದ್ದು, ನಾನು ಜಮೀನಿನ ಭೂಪರಿವರ್ತನೆಗೆ ಜಿಲ್ಲಾಧಿಕಾರಿಯವರಿಂದ ವಿಧಿಸಲ್ಪಡುವ ಯಾವುದೇ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತೇನೆ.

1. ಭೂಪರಿವರ್ತಿತ ಆದೇಶವು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಆದೇಶದ ಸಂ.ಎಎಲ್ಎನ್( )ಎಸ್ಆರ್. /11–12ರಂತೆ ನೆಲಮಂಗಲ ಯೋಜನಾ ಪ್ರಾಧಿಕಾರ, ಇವರಿಂದ ಪೂರ್ವಾನುಮತಿ ಪಡೆಯದೆ ಉಪಯೋಗಿಸಿಕೊಳ್ಳಲು ನನಗೆ ಯಾವ ರೀತಿಯ ಹಕ್ಕು ಇರುವುದಿಲ್ಲ.

2. ಈ ಭೂಪರಿವರ್ತಿತ ಜಮೀನನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳಲಾಗುವುದು ಹಾಗೂ ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳತಕ್ಕದ್ದು.

3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಸಂಬಂಧಪಟ್ಟ ನೆಲಮಂಗಲ ಯೋಜನಾ ಪ್ರಾಧಿಕಾರವರಿಂದ ಅನುಮೋದಿಸಿಕೊಂಡು ಆನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟುತ್ತೇನೆ. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡುವುದಿಲ್ಲ.

4. ಇತರೆ ಅವಶ್ಯಕವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ಸಂಬಂಧಪಟ್ಟ ನೆಲಮಂಗಲ ಯೋಜನಾ ಪ್ರಾಧಿಕಾರರವರಿಂದ ಅನುಮೋದಿಸಿ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸುತ್ತೇನೆ.

5. ನಾನು ಇತರೆ ವ್ಯಕ್ತಿಗಳು ಈ ಜಮೀನಿನಲ್ಲಿ ಕಟ್ಟುವ ಕಟ್ಟಡಗಳಿಗೆ ಅವಶ್ಯಕವಾದ ಪರವಾನಗಿಯನ್ನು ಸಂಬಂಧಪಟ್ಟ ಗ್ರಾಮಪಂಚಾಯಿತಿ:ಅಧಿಸೂಚಿತ ಪ್ರದೇಶ ಸಮಿತಿ: ನೆಲಮಂಗಲ ಅಭಿವೃದ್ದಿ ಪ್ರಾಧಿಕಾರ:ಪುರಸಭೆ:ಮುನಿಸಿಫಲ್ ಕಾರ್ಪೋರೇಷನ್ ಇವರುಗಳಿಂದ ಪಡೆದು ಕಟ್ಟಡಗಳನ್ನು ಪ್ರಾರಂಭಿಸುತ್ತೇನೆ. ಒಂದು ವೇಳೆ ಹಾಗೆ ಪರವಾನಗಿ ಇಲ್ಲದೇ ಕಟ್ಟಡಗಳನ್ನು ಕಟ್ಟಿದ್ದಲ್ಲಿ ಅಂತಹ ಕಟ್ಟಡಗಳನ್ನು ಅನಧಿಕೃತ ಕಟ್ಟಡಗಳೆಂದು ಪರಿಗಣಿಸಿ ಕಾನೂನು ರೀತಿ ಕ್ರಮಕೈಗೊಳ್ಳಲು ನನ್ನ ಅಭ್ಯಂತರವೇನೂ ಇರುವುದಿಲ್ಲ.

6. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲ್ಯೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುತ್ತೇನೆ.

7. ಈ ಜಮೀನಿಗೆ ತಾಕು ಪೋಟ್ ಖರಾಬು ಜಮೀನಿದ್ದಲ್ಲಿ ಕರ್ನಾಟಕ ಭೂಕಂದಾಯ ಕಾಯಿದೆ 1964ರ ಕಲಂ 67ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸುತ್ತೇನೆ.

8. ಸರ್ಕಾರದ ಆದೇಶದ ಸಂಖ್ಯೆ:ಪಿಡಬ್ಲ್ಯುಡಿ.7556–665–ಆರ್ ಮತ್ತು ಬ–6–54–5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ:ಪಿ.1:7(11)67, ದಿನಾಂಕ:1.01.1966ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರುಗಳ ಅಂತರವನ್ನು ಕಾಯ್ದಿರಿಸುತ್ತೇನೆ ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟುವುದಿಲ್ಲ.

9. ನಾನು ನಗರ ಭೂಪರಿಮಿತಿ ಕಾಯಿದೆ 1976ರ ವಿಧಿ 6(1)ರ ಪ್ರಕಾರ ಸಕ್ಷಮ ಪ್ರಾಧಿಕಾರದಲ್ಲಿ ಘೋಷಣೆ ಪತ್ರವನ್ನು ಸಲ್ಲಿಸುತ್ತೇನೆ.

10. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ನನಗೆ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಬಹುದಾಗಿರುತ್ತದೆ ಮತ್ತು ಕರ್ನಾಟಕ ಭೂಕಂದಾಯ ಕಾಯಿದೆ 1964ರ ಕಲಂ 96ರಂತೆ ದಂಡ ಶುಲ್ಕವನ್ನು ವಿಧಿಸಿದ್ದಲ್ಲಿ ಅದನ್ನು ಕಟ್ಟಲು ಬದ್ಧನಾಗಿರುತ್ತೇನೆ. ಅಲ್ಲದೆ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ನನ್ನ ಸಮ್ಮತಿ ಇದೆ ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೇದಾರರಿಂದ ವಸೂಲಿ ಮಾಡಲು ನನ್ನ ಅಭ್ಯಂತರವೇನು ಇರುವುದಿಲ್ಲ.

ಸದರಿ ಆದೇಶದಲ್ಲಿನ ಯಾವುದೇ ಷರತ್ತುಗಳನ್ನು ನನ್ನಿಂದ:ಪ್ರತಿನಿಧಿಗಳಿಂದ: ಉತ್ತರಾಧಿಕಾರಿಗಳಿಂದ/ಏಜೆಂಟ್‌ರವರಿಂದ/ಸೇವಕರಿಂದಾಗಲೀ ಉಲ್ಲಂಘನೆಯಾದಲ್ಲಿ ನೀಡಿದ ಅನುಮತಿಯನ್ನು ವಾಪಸ್ ಪಡೆಯಲು ಅಲ್ಲದೇ ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ 96ರ ಅಡಿಯಲ್ಲಿ ವಿಧಿಸುವ ದಂಡನೆಗೆ ಒಳಪಟ್ಟಿರುತ್ತೇನೆ.

ನಾನು ಈ ದಿನ ...............ರಂದು ಈ ದಸ್ತಾವೇಜು (ಕರಾರು) ಅನ್ನು ಬರೆದುಕೊಟ್ಟಿರುತ್ತೇನೆ.

**<u>ಷೆಡ್ಯೂಲ್ ವಿವರ</u>**

ಬೆಂಗಳೂರು ಗ್ರಾಮಾಂತರ ಜಿಲ್ಲೆ ................ ತಾಲ್ಲೂಕು ............... ಹೋಬಳಿ, ................... ಗ್ರಾಮದ ಸ.ನಂ. ............. ರಲ್ಲಿ ................ ವಿಸ್ತೀರ್ಣವನ್ನು ವಾಸದ ಉದೇಶಕ್ಕಾಗಿ ಭೂಪರಿವರ್ತನೆ ಕೋರಿರುವ ಜಮೀನಿಗೆ ಚೆಕ್ಕುಬಂದಿ:

| | |
|---|---|
| ಪೂರ್ವಕ್ಕೆ | |
| ಪಶ್ಚಿಮಕ್ಕೆ | |
| ಉತ್ತರಕ್ಕೆ | |
| ದಕ್ಷಿಣಕ್ಕೆ | |

ಸಾಕ್ಷಿದಾರರು : (ಅರ್ಜಿದಾರರ ಸಹಿ)

1)

ಹೆಸರು ಮತ್ತು ವಿಳಾಸ:

2)

ಹೆಸರು ಮತ್ತು ವಿಳಾಸ: